**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :28.02.2025**

**ಪಾಟೀ ಸವಾಲು - ವಾದಿ ಪರ ವಕೀಲರಿಂದ :**

1 ನೇ ಪ್ರತಿವಾದಿ ನನ್ನ ಚಿಕ್ಕಪ್ಪ. ಅವರಿಗೆ 8 ಜನ ಮಕ್ಕಳು. 4 ಜನ ಹೆಣ್ಣು ಮಕ್ಕಳು ಮತ್ತು 4 ಜನ ಗಂಡು ಮಕ್ಕಳು ಎಂದರೆ ಸರಿ. ನನ್ನ ಮತ್ತು ಅವರ ಮಧ್ಯೆ ಒಡನಾಟ ಇದೆ ಎಂದರೆ ಸರಿ. ಅವರಿಗೆ ದಾವ ಸ್ವತ್ತಿನಲ್ಲಿ ಎಷ್ಟು ಆಸ್ತಿಗಳು ಬಂದಿದ್ದವು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನು ಹೇಳಿದಂತೆ ವಕೀಲರು ಬರೆದಿರುತ್ತಾರೆ. ದಿನಾಂಕ 21.03.1963 ರಂದು ಆದ ವಿಭಾಗದಲ್ಲಿ 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳಿಗೆ ಭಾಗ ನೀಡಿರುವುದಿಲ್ಲ. ಇನ್ನೊಮ್ಮೆ ವಿಭಾಗ ಪಟ್ಟಿ ಮಾಡಿಕೊಂಡಾಗ ಸಹ ಹೆಣ್ಣು ಮಕ್ಕಳಿಗೆ ಭಾಗ ನೀಡಿರುವುದಿಲ್ಲ. ಹೆಣ್ಣು ಮಕ್ಕಳು ಬೇಡ ಎಂದು ಹೇಳಿರುತ್ತಾರೆಂದು ಸ್ವತಃ ನುಡಿಯುತ್ತಾರೆ. 5 ನೇ ಪ್ರತಿವಾದಿಗೆ ಯಾವ ಆಸ್ತಿಗಳನ್ನು ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ. ವಿಭಾಗ ಮಾಡಿಕೊಂಡಾಗ 5 ನೇ ಪ್ರತಿವಾದಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. 1990 ರಲ್ಲಿ 5 ನೇ ಪ್ರತಿವಾದಿಗೆ ಕೇವಲ 15 ವರ್ಷ ಆಗಿದ್ದು, ಅವರಿಗೆ ವಿಭಾಗದಲ್ಲಿ ಯಾವುದೇ ಭಾಗ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅವರ ಹಿಸ್ಸೆಗೆ ಒಟ್ಟು ಕುಟುಂಬಕ್ಕೆ ಸೇರದ ಬೇರೆಯವರ 20 ಗಂಟೇ ಜಮೀನನ್ನು ನಮೂದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಿನಾಂಕ 25.03.1990 ರಂದು ಯಾವುದೇ ಭಾಗ ಆಗಿರುವುದಿಲ್ಲ ಹಾಗೂ 2 ರಿಂದ 4 ನೇ ಪ್ರತಿವಾದಿಗಳು ಕುಟುಬಂದ ಉಳಿದ ಸದಸ್ಯರಿಗೆ ತಿಳಿಯದೇ ಹಾಗೆ ಖಾತೆಗಳನ್ನು ಬದಲಾಯಿಸಿಕೊಂಡಿದ್ದಾರೆಂದರೆ ಸರಿಯಲ್ಲ. ಹೆಣ್ಣು ಮಕ್ಕಳಿಗೆ ಸದರಿ ವಿಭಾಗದ ಬಗ್ಗೆ ತಿಳಿಸಿರುವುದಿಲ್ಲ ಮತ್ತು ಅವರು ವಿಭಾಗ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ವಿಭಾಗ ಆಗುವುದು ಗೊತ್ತಿತ್ತು ಆದರೆ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು 1 ನೇ ಪ್ರತಿವಾದಿಗೆ ಹೆಣ್ಣು ಮಕ್ಕಳಿಗೆ ಭಾಗ ನೀಡುವಂತೆ ಕೇಳಿರುವುದಿಲ್ಲ. ನಿಡಿ-96 ರಲ್ಲಿ 2 ರಿಂದ 4 ನೇ ಪ್ರತಿವಾದಿಗಳು ಅವರ ಅನುಕೂಲತಕ್ಕಂತೆ ಹೆಣ್ಣು ತಿಳಿಯದೇ ಹಾಗೆ ಮಾಡಿಕೊಂಂಡಿದ್ದಾರೆಂದರೆ ಸರಿಯಲ್ಲ. ನಾನು 2 ರಿಂದ 4 ನೇ ಪ್ರತಿವಾದಿಗಳ ಜೊತೆ ಶಾಮೀಲಾಗಿ ಅವರಿಗೆ ಅನುಕೂಲವಾಗಲೀ ಎಂದು ಪತ್ರಕ್ಕೆ ಸಹಿ ಮಾಡಿದ್ದೇನೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2006 ರಲ್ಲಿ 1 ನೇ ಪ್ರತಿವಾದಿ ಅನಾರೋಗ್ಯ ಪೀಡಿತರು ಆಗಿದ್ದರು ಎಂದರೆ ಇಸವಿ ಗೊತ್ತಿಲ್ಲ ಆದರೆ ಅನಾರೋಗ್ಯದಿಂದ ಇದ್ದರು ಎಂದು ನುಡಿಯುತ್ತಾರೆ. ಅವರು ಹೆಣ್ಣು ಮಕ್ಕಳಿಗೆ ಭಾಗ ನೀಡುವಂತೆ 2 ರಿಂದ 4 ನೇ ಪ್ರತಿವಾದಿಗಳಿಗೆ ಒತ್ತಾಯ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಅನಾರೋಗ್ಯದಿಂದ ಇದ್ದರಿಂದ ಕಾರಣ 2 ರಿಂದ 4 ನೇ ಪ್ರತಿವಾದಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಕಂದಾಯ ದಾಖಲೆಗಳನ್ನು ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಈ

ನ್ಯಾಯಾಲಯದಿಂದ 1 ನೇ ಪ್ರತಿವಾದಿಯ ಎಲ್ಲಾ ಮಕ್ಕಳಿಗೆ ಸಮಾನವಾಗಿ ಭಾಗ ಮಾಡಿಕೊಟ್ಟರೇ ನನಗೆ ಯಾವುದೇ ತೊಂದರೆ ಇಲ್ಲ. ನಿಡಿ-96 ಕಾನೂನು ಸಮ್ಮತವಾಗಿಲ್ಲ ಹಾಗೂ 2 ರಿಂದ 4 ನೇ ಪ್ರತಿವಾದಿಗಳು ತಮ್ಮ ಇಚ್ಛೆಯಂತೆ ಭಾಗ ಮಾಡಿಕೊಂಡು ತಮ್ಮ ಸಹಿ ಪಡೆದುಕೊಂಡಿದ್ದಾರೆಂದರೆ ಸರಿಯಲ್ಲ. ಸದರಿ ವಿಭಾಗದ ಬಗ್ಗೆ 1 ನೇ ಪ್ರತಿವಾದಿಗೆ ಗೊತ್ತಿರಲಿಲ್ಲ ಕೇವಲ ಹೆಬ್ಬೆರಳ ಗುರುತನ್ನು ಪಡೆದುಕೊಂಡಿದ್ದಾರೆಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನ್ನು ನೊಂದಣಿ ಮಾಡಿರುವುದಿಲ್ಲ. ನಾವು ವಿಭಾಗ ಪತ್ರವನ್ನು ನೊಂದಣಿ ಮಾಡಿಕೊಳ್ಳುವಂತೆ ಅವರಿಗೆ ಹೇಳಿರುವುದಿಲ್ಲ. 2 ರಿಂದ 4 ನೇ ಪ್ರತಿವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ನುಡಿಯುತ್ತಿದ್ದೇನೆ ಹಾಗೂ ನಾನು ಹೇಳುವಂತೆ ಯಾವುದೇ ವಿಭಾಗ ಆಗಿರುವುದಿಲ್ಲ ಹಾಗೂ ಈಗಲೂ ಸಹ ಒಟ್ಟು ಕುಟಂಬದ ಆಸ್ತಿ ಹಾಗೇ ಉಳಿದಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - 5 ನೇ ಪ್ರತಿವಾದಿ ಪರ ವಕೀಲರಿಂದ :**

ನನಗೆ 4 ನೇ ಪ್ರತಿವಾದಿ ತುಂಬಾ ಆತ್ಮೀಯರು ಎಂದರೆ ಸರಿಯಲ್ಲ. ನಮ್ಮ ಕುಟುಂಬದವರು ಮತ್ತು 1 ನೇ ಪ್ರತಿವಾದಿಯ ಕುಟುಂಬದ ತುಂಬಾ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. 1990 ರಲ್ಲಿ 5 ನೇ ಪ್ರತಿವಾದಿ ಶಾಲೆಗೆ ಹೋಗುತ್ತಿದ್ದರು. ಆ ಸಮಯದಲ್ಲಿ ಅವರು ಅಪ್ರಾಪ್ತ ವಯಸ್ಕರು ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ 4 ನೇ ಪ್ರತಿವಾದಿ ಪೋಷಣೆಯಲ್ಲಿದ್ದರು ಎಂದರೆ ಸರಿ. 5 ನೇ ಪ್ರತಿವಾದಿಯ ವಿದ್ಯಾಭ್ಯಾಸವನ್ನು 4 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಿಭಾಗ ಪತ್ರಕ್ಕೆ 5 ನೇ ಪ್ರತಿವಾದಿಗೆ ತಿಳಿಸದೇ 4 ನೇ ಪ್ರತಿವಾದಿ ಕರೆದು ಅವರ ಸಹಿ ಮಾಡಿಸಿರುತ್ತಾರೆಂದರೆ ಸರಿಯಲ್ಲ. ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ವಿಭಾಗ ಮಾಡಿಕೊಳ್ಳುವ ಬಗೆಗ ಮಾತುಕತೆ ಆಗಿತ್ತು. ಆದರೆ ಮಾಕಕತೆ ಆದ ಇಸವಿ ಗೊತ್ತಿಲ್ಲ. ವಿಭಾಗ ಪತ್ರ ಮಾಡಿಕೊಳ್ಳುವ 1-2 ವರ್ಷ ಹಿಂದೆ ಮಾತುಕತೆ ಆಗಿತ್ತು. ಆ ಸಮಯದಲ್ಲಿ 1 ನೇ ಪ್ರತಿವಾದಿಯ ಎಲ್ಲಾ ಮಕ್ಕಳು ಇದ್ದರು. ಮಾತುಕತೆ ಆದಾಗ ಎಲ್ಲಾ ಹೆಣ್ಣು ಮಕ್ಕಳಿಗೆ ಮದುವೆ ಆಗಿ ಅವರವರ ಗಂಡಂದಿರ ಮನೆಗಳಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ವಿಭಾಗ ಪತ್ರವನ್ನು ಚಿಕ್ಕಜಾಲದ ಶಾನುಬೋಗರು ಬರೆದಿರುತ್ತಾರೆ. ನಿಡಿ-96 ನ್ನು ಬರೆಯಲು 1 ನೇ ಪ್ರತಿವಾದಿಯ ಎಲ್ಲಾ ಮಕ್ಕಳು ಮಾಹಿತಿ ನೀಡಿರುತ್ತಾರೆ. 5 ನೇ ಪ್ರತಿವಾದಿಗೆ ನಿಡಿ-96 ಬಗ್ಗೆ ಗೊತ್ತಿಲ್ಲ ಹಾಗೂ 2 ರಿಂದ 4 ನೇ ಪ್ರತಿವಾದಿಗಳು ಅವರ ಅನುಕೂಲತಕ್ಕಂತೆ ಅದನ್ನು ಬರೆಸಿಕೊಂಡಿದ್ದಾರೆಂದರೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಹೆಣ್ಣು ಮಕ್ಕಳನ್ನು ಕರೆಸಿರಲಿಲ್ಲ ಎಂದರೆ ಸರಿಯಲ್ಲ. ಬರವಣಿಗೆ ಆದಾಗ ಹೆಣ್ಣು ಮಕ್ಕಳು ಇದ್ದ ಬಗ್ಗೆ ಒಕ್ಕಣೆ ಇಲ್ಲ ಎಂದರೆ

ಸರಿ. ಸದರಿ ಬರವಣಿಗೆಯ ಬಗ್ಗೆ 5 ಪ್ರತಿವಾದಿ ಮತ್ತು ಹೆಣ್ಣು ಮಕ್ಕಳಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ 1 ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಮತ್ತು ಎಷ್ಟು ಗಂಡು ಮತ್ತು ಹೆಣ್ಣು ಮಕ್ಕಳು ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ಅವರವರಿಗೆ ಬೇಕಾಗದ ಆಸ್ತಿಗಳನ್ನು ಬರೆಸಿಕೊಂಡಿದ್ದಾರೆಂದರೆ ಅವರ ತಂದೆ ಹೇಳಿದಂತೆ ಬರೆಸಿದ್ದಾರೆ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಆಸ್ತಿಗಳನ್ನು ಯಾವ ರೀತಿ ವಿಭಾಗ ಮಾಡಿಕೊಂಡಿದ್ದಾರೆಂದು 5 ನೇ ಪ್ರತಿವಾದಿಗೆ ಈಗಲೂ ಗೊತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು 4 ನೇ ಪ್ರತಿವಾದಿಯ ಸ್ನೇಹಿತನ್ನಾಗಿರುವುದರಿಂದ ಅವರ ಮಾತುಕತೆ ಕೇಳಿ ವಿಭಾಗ ಪತ್ರಕ್ಕೆ ಸಹಿ ಮಾಡಿ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಡಿ-96 ಕಾನೂನು ರೀತಿ ಮಾಡಿಕೊಂಡಿಲ್ಲ ಹಾಗೂ 2 ರಿಂದ 4 ನೇ ಪ್ರತಿವಾದಿಗಳ ಅನುಕೂಲತಕ್ಕಂತೆ ಮಾಡಿಕೊಂಡಿದ್ದರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರ ಚಾಲ್ತಿಗೆ ಬಂದಿಲ್ಲ ಹಾಗೂ 10 ವರ್ಷ ಬಿಟ್ಟು ಕಂದಾಯ ದಾಖಲೆಗಳಲ್ಲಿ ಹೆಸರು ನಮೂದಿಸಿಕೊಂಡಿದ್ದಾರೆಂದರೆ ಯಾವಾಗ ನಮೂದಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸಿದ ನಂತರ ಕೇಲವು ದಾವ ಆಸ್ತಿಗಳ ಬಗ್ಗೆ 2 ರಿಂದ 4 ನೇ ಪ್ರತಿವಾದಿಗಳು ತಮ್ಮ ಹೆಸರುಗಳನ್ನು ನಮೂದಿಸಿಕೊಂಡು ಅವುಗಳನ್ನು ವಿಲೇ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನನಗೆ ಒಟ್ಟು ಕುಟುಂಬದ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ. ನಾನು 2 ರಿಂದ 4 ನೇ ಪ್ರತಿವಾದಿಗಳ ಮಾತುಕತೆ ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದಾರೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**( ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಅವಕಾಶ ಕೋರಿದ್ದರಿಂದ ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ..**